9

# ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿರಿ (1 ಪೇತ್ರ 4:12-19)

ಫಿಲಿಪ್ಪಿಯ ಪಟ್ಟಣದಲ್ಲಿ ವಾಸವಾಗಿರುವ ಒಂದು ಧರ್ಮದ ಗುಂಪಿನವರು ಒಂದು ಆಸಕ್ತಿಕರವಾದ ಸಂಪ್ರದಾಯವನ್ನು ಹೊಂದಿದ್ದಾರೆ ಎಂಬ ಅಂಶವನ್ನು ನೀವುಗಳು ಸುದ್ದಿ ಮಾಧ್ಯಮದಲ್ಲಿ ಓದಿರಬಹುದು. ಪ್ರತಿ ವರ್ಷದ ಪುನರುತ್ಥಾನದ ಹಬ್ಬದ ದಿನದಂದು, ಪ್ರತಿಯೊಬ್ಬರು ತಮ್ಮ ಬೆನ್ನಿಗೆ ಒಂದು ಶಿಲುಬೆಯನ್ನು ಕಟ್ಟಿಕೊಂಡಿರುತ್ತಾರೆ. ಮತ್ತು ಇತರರು ಅವರ ಹಿಂದೆ ಮೆರವಣಿಗೆಯಲ್ಲಿ ಸಾಗುತ್ತಾರೆ. ಒಂದು ನಿರ್ದಿಷ್ಟವಾದ ಸ್ಥಳವನ್ನು ಸೇರಿದ ನಂತರ, ಶಿಲುಬೆಯನ್ನು ಧರಿಸಿರುವ ಪುರುಷರನ್ನು ಅಕ್ಷರಶಃ ಮರದ ಶಿಲುಬೆಗೆ ನೇತು ಹಾಕುತ್ತಾರೆ. ಇದನ್ನು ಮಾಡುವವರು ಯಥಾರ್ಥರೆ, ಆದರೆ ಶಿಲುಬೆಯ ವೇದನೆಗಳಲ್ಲಿ ಪಾಲು ತೆಗೆದುಕೊಳ್ಳುವದು ಅಂದರೆ, ಇದಕ್ಕಿಂತಲೂ ವಿಭಿನ್ನವಾಗಿರುತ್ತದೆ ಎಂದು ನಾನು ತಿಳಿದಿದ್ದೇನೆ. ಕ್ರೈಸ್ತರು ಆತನ ವೇದನೆಗಳಲ್ಲಿ ಪಾಲುಗಾರರಾಗುವಾಗ, ಅಂದರೆ 4:13 ಬೋಧಿಸಿದಂತೆ, ಅವರು ಸಹ ಬೋಧಿಸಿ ಜೀವಿಸುತ್ತಾರೆ.

## ಬಾಧೆಯ ಕುರಿತು ಆಶ್ಚರ್ಯಪಡಬೇಡಿ (4:12-15)

ಪೇತ್ರನ ಓದುಗರ ನಾಲ್ಕು ಮುಖ್ಯವಾದ ಬಾಧೆಗಳ ವಿವರಣೆಗಳು (1:6, 7; 3:13-17; 4:12-19; 5:9, 10), 4:12-19ರಲ್ಲಿರುವ ವಿವರಣೆ ಹೆಚ್ಚು ಎದ್ದು ಕಾಣುತ್ತದೆ. 12 ವಚನದಲ್ಲಿ ಅದರ ಸ್ವರ ಮತ್ತು ವಿಷಯವು ಇದ್ದಕ್ಕಿದ್ದ ಹಾಗೆ ಬದಲಾವಣೆಯಾಗಿದೆ, ಪೇತ್ರನು 4:11ರವರೆಗೆ ಮಾತ್ರ ಬರೆದಿರುವನು ಎಂದು ಕೆಲವರ ಗ್ರಹಿಕೆ ಮತ್ತು ನಂತರ ಅವನು ಬರೆಯಲಿಲ್ಲ ಎಂಬ ಅನಿಸಿಕೆ. ಅವನು ಹಿಂಸೆಯು ಉಂಟಾಯಿತು ಎಂದು ತಿಳಿದ ನಂತರ ಮುಂದುವರೆಸಿದನು ಎಂಬುದಾಗಿ, ಅದು ಸತ್ಯವಿರಬಹುದು ಅಥವಾ ಇಲ್ಲದೆ ಇರಬಹುದು; ಆದರೆ ವಚನ 11 ಮತ್ತು 12ರ ಮಧ್ಯದ ಅವನ ಆಲೋಚನೆಯ ಭಾಗವಾಗಿತ್ತು ಎಂಬ ಧಾರ್ಮಿಕ ಅಭಿಪ್ರಾಯವಿದೆ.

ಕ್ರಮ ಪದ್ಧತಿ ಮತ್ತು ಅರ್ಥಗಳು ಬದಲಾಗುತ್ತವೆ, ಯೇಸು ಜೀವಿಸ ಬೋಧಿಸಿದ ಹಾಗೆ ಜೀವಿಸಲು ಯತ್ನಿಸುವವರನ್ನು ಬಾಧೆಗಳು ಹಿಂಬಾಲಿಸುತ್ತವೆ. 2 ತಿಮೊಥೆ 3:12 ಪೌಲನ ವಿವರಣೆ: "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು." ಎಂಥಾ ಒಂದು ಹೊಂದಾಣಿಕೆಯನ್ನು ಸಮಾಧಾನದ ಪ್ರಭುವು ಹೇಳಿರುವನು, "ಭೂಲೋಕದಲ್ಲಿ ಸಮಾಧಾನವನ್ನುಂಟು ಮಾಡುವದಕ್ಕೆ ಬಂದೆನೆಂದು ಭಾವಿಸುತ್ತೀರೋ? ಅದಕ್ಕೆ ಬರಲಿಲ್ಲ, ಬೇಧವನ್ನುಂಟು ಮಾಡುವದಕ್ಕೆ ಬಂದೆನು" (ಲೂಕ 12:51). ಯೇಸುವನ್ನು ಕ್ರಿಸ್ತನೆಂದು ಅರಿಕೆ ಮಾಡುವದರಿಂದ, ಕ್ರೈಸ್ತರು ಹಿಂಸೆಗೆ ಒಳಗಾಗುವವರು ಎಂಬ ಬೆಲೆಯುಳ್ಳ ತಾತ್ಪರ್ಯವನ್ನು ಪೇತ್ರನು ನೀಡಿದ್ದಾನೆ.

### ಶೋಧನೆಗಳನ್ನು ನಿರೀಕ್ಷಿಲೇಬೇಕು

ಯಾಕೆ ಕ್ರೈಸ್ತರು ಎದುರಿಸಲ್ಪಡುತ್ತಾರೆ ಮತ್ತು ಕೀಳರಿಮೆಗೆ ತಳ್ಳಲ್ಪಡುತ್ತಾರೆ, ಎಂಬುದಕ್ಕೆ ಸಕಾರಣವು ಇರುವದಿಲ್ಲ. ಮೊದಲ ಶತಮಾನದ ಆಸ್ಯ ಸೀಮೆಯಲ್ಲಿ, ಸ್ತ್ರೀ ಪುರುಷರು ಒಳ್ಳೆಯ ವಿಶ್ವಾಸದಿಂದ ಕ್ರಿಸ್ತನನ್ನು ಅಂಗೀಕರಿಸಿದ್ದರು. ಆತನೇ ದೇವ ಕುಮಾರನೆಂದು ನಂಬಿದ್ದರು; ಈ

ನಂಬಿಕೆಯನ್ನು ಪ್ರೋತ್ಸಾಹಿಸಿ ಬಲಪಡಿಸಿದ ಜನರು ಅವರೊಂದಿಗಿದ್ದರು. ಅವರು ಎಲ್ಲರನ್ನು ಸಹೋದರರೆಂದು ತಿಳಿದಿದ್ದರು, ಅವರು ಸ್ವನಾಶದಿಂದಲೂ, ಮತ್ತು ಪಾಪದಿಂದಲೂ ದೂರವಾಗಿದ್ದರು, ಅವರು ತಮ್ಮ ಕುಟುಂಬವನ್ನು ಚೆನ್ನಾಗಿ ನಡೆಸಲು, ಕಷ್ಟಪಟ್ಟು, ಯಥಾರ್ಥವಾಗಿ ಸಂಪಾದಿಸುತ್ತಿದ್ದರು. ಅವರು ಹಿಂಸೆಪಡುವದು ಅನರ್ಥವಾಗಿತ್ತು. ಆದರೆ ಅದು ಸಂಭವಿಸಿತು ಎಂದು ಅವರು ತಿಳಿಯದಾದರು. ಪೇತ್ರನು ಸಹ ನಿಜವಾದ ವಿವರಣೆಯನ್ನು ನೀಡಲಿಲ್ಲ. ಆದರೆ ಅದು ಅನುಭವಿಸಬೇಕಾದ ಸತ್ಯವೇ ಎಂದು ತಿಳಿಸಿದನು (4:12).

ಶತಮಾನದ ಆರಂಭದಲ್ಲಿ, ರೋಮಾ ಸಾಮ್ರಾಜ್ಯದಲ್ಲಿದ್ದ ಕ್ರೈಸ್ತರು ಯಾಕೆ ಹಿಂಸೆಗೊಳಗಾದರು? ಕಳೆದ ನೂರು ವರ್ಷಗಳಿಂದ, ಇದರ ಕುರಿತಾದ ಉತ್ತರಗಳನ್ನು ಪಂಡಿತರುಗಳು ತಿಳಿಸಲು, ಅನೇಕ ಪುಸ್ತಕಗಳನ್ನು ಬರೆದಿರುವರು ಎಂದು ಪುರಾತನ ದಾಖಲೆಗಳು ಹೇಳುತ್ತವೆ. ಅದರಲ್ಲಿ ಭಾಗಶಃ ಯಶಸ್ಸನು ಮಾತ್ರ ಹೊಂದಿದ್ದಾರೆ. ಪರಿವರ್ತನೆಯಾದವರನ್ನು ಕ್ರೈಸ್ತ ಗೆದ್ದು ಕೊಂಡಿದ್ದರಿಂದ, ಅವರು ಜನರ ದ್ವೇಷಕ್ಕೆ ಒಳಗಾದರು. ಸೆಲ್ಸಸ್ ಎಂಬಾತನಿಗೆ ಉತ್ತರಿಸಲು, ಮೂರನೇ ಶತಮಾನದಲ್ಲಿದ್ದ ಓರಿಜನು ಕೆಲವು ವಿಷಯಗಳನ್ನು ಬರೆದಿದ್ದನು. ಅವನು ಕ್ರೈಸ್ತರ ಕಟ್ಟಾ ವಿರೋಧಿಯಾಗಿದ್ದನು. ಓರಿಜನನ ಕಾರ್ಯವು ಜೀವಂತವಾಗಿದೆ. ಆದರೆ ಓರಿಜನನ ಹಳೆಯ ದಾಖಲೆಗಳಿಂದ ಉದ್ಧವಾದ ಹೇಳಿಕೆಗಳನ್ನು ಸೆಲ್ಸನು ಸಹ ಬರೆದಿದ್ದಾನೆ. "ಅವನು ಕ್ರೈಸ್ತರನ್ನು" ಉಣ್ಣೆಯ - ಪ್ರವೃತ್ತಿಯವರು ಚರ್ಮಕಾರರು, ದೋಬಿಗಳು, ವಿಧ್ಯೆ ಇಲ್ಲದವರು ಮತ್ತು ಪಶು ಪಾಲಕರು ಎಂದು ವಿವರಿಸಿದನು. "ಅವರು ಮಕ್ಕಳನ್ನು ಹಾಗೂ ಸ್ತ್ರೀಯರನ್ನು ಒಳಸಂಚಿನಿಂದ ತಮ್ಮ ಹಾದಿಯಲ್ಲಿ ನಡೆಯುವಂತೆ ಮಾಡಿದರು." ಕ್ರೈಸ್ತರು ಈ ರೀತಿಯಾಗಿ ಅವರ ಸ್ತ್ರೀಯರನ್ನು, ಮಕ್ಕಳನ್ನು ಕ್ರಿಸ್ತನ ಕಡೆಗೆ ತಿರುಗಿಸಿದ್ದರಿಂದ ಅವರ ಕುಟುಂಬಗಳು ಗೊಂದಲಕ್ಕೀಡಾಯಿತು. ಈ ದೆಸೆಯಿಂದ ಇತರರು ಸಹ ಕ್ರೈಸ್ತರನ್ನು ಟೀಕಿಸಿ ಹಿಂಸಿಸಿದರು.

ದೇವರನ್ನರಿಯದವರು ಕ್ರೈಸ್ತರನ್ನು ಹಿಂಸಿಸಲು ಹಲವಾರು ಮಾರ್ಗೋಪಾಯವನ್ನು ಮಾಡಿರಬಹುದು, ಯಾಕೆಂದರೆ ಕ್ರೈಸ್ತರು ಬಹಳ ಉತ್ತಮರಾಗಿದ್ದೆ ಪ್ರಾಮುಖ್ಯವಾದ ಸಂಗತಿಯಾಗಿತ್ತು. ಸುಳ್ಳಾಡುವವರ ಪಾಪವು ಕಳ್ಳತನವು, ತಮ್ಮ ಜೊತೆಯವರ ನಿಂದನೆ, ಇವುಗಳು ನ್ಯಾಯವಾಗಿಯೂ, ಪರಿಶುದ್ಧವಾಗಿಯೂ ಇರುವವರಿಗೆ ತದ್ವಿರುದ್ಧವಾದ ಕಾರ್ಯಗಳಾಗಿ ಅತಿರೇಖವಾಗಿ ಪ್ರವರ್ತಿಸುತ್ತದೆ. ಎಲ್ಲಾ ಸಮಯಗಳಲ್ಲಿಯು ಕ್ರೈಸ್ತರು ಹಿಂಸೆಗೆ ಬಲಿಯಾಗಿದ್ದರು ಎಂದು ಯೋಹಾನನು ಸಹ ಉಲ್ಲೇಖಿಸಿದ್ದಾನೆ: "ಕೆಡುಕನಿಂದ ಹುಟ್ಟಿ ತನ್ನ ತಮ್ಮನನ್ನು ಕೊಂದು ಹಾಕಿದ ಕಾಯಿನನಂತೆ ನಾವು ಇರಬಾರದು, ಯಾವ ಕಾರಣದಿಂದ ಅವನನ್ನು ಕೊಂದುಹಾಕಿದನು? ತನ್ನ ಕೃತ್ಯಗಳು ಕೆಟ್ಟವುಗಳು ತನ್ನ ತಮ್ಮನ ಕೃತ್ಯಗಳು ನೀತಿಗೆ ಸರಿಯಾದವುಗಳೂ ಆಗಿದ್ದರಿಂದಲೇ ಸಹೋದರರೇ ಲೋಕವು ನಿಮ್ಮನ್ನು ದ್ವೇಷಿಸಿದರೆ ಆಶ್ಚರ್ಯ ಪಡಬೇಡಿರಿ" (1 ಯೋಹಾನ 3:12, 13). ಯೇಸುವಿನ ಜೀವನದಂತೆ ಕ್ರೈಸ್ತರು ಜೀವಿಸಲು ಯತ್ನಿಸುವಾಗ, ಅವರು ಹಿಂಸೆಯನ್ನು ಅನುಭವಿಸುವ ಸ್ಥಿತಿಗೆ ಬರುವಾಗ ಆಶ್ಚರ್ಯ ಪಡುವ ಅವಶ್ಯವಿರುವದಿಲ್ಲ.

**ಆತನ ಬಾಧೆಗಳಲ್ಲಿ ಪಾಲುಗಾರರಾಗುವುದು ಆನಂದಕ್ಕೆ ಕಾರಣವಾಗಿದೆ**

ಕ್ರೈಸ್ತರು ಬಾಧೆಗಳನ್ನು ಅನುಭವಿಸಿದ ಪರಿಣಾಮವೇ ಅವರ ಪ್ರತಿಫಲ ಎಂಬುದಾಗಿ ಪೇತ್ರನು ಹೇಳಿರುವದಿಲ್ಲ. ಅವರು ಹಿಂಸೆಗೂ ಸಂಕಷ್ಟಕ್ಕೂ ಒಳಗಾದಾಗ, ಅವರು ಕ್ರಿಸ್ತನ ಬಾಧೆಗಳಲ್ಲಿ ಪಾಲು ತೆಗೆದುಕೊಳ್ಳುವ ಅವಕಾಶವನ್ನು ಹೊಂದಿರುವರು ಎಂಬುದಾಗಿ (4:13). ಇದು ಆನಂದಕ್ಕೆ ಕಾರಣವಾಯಿತು. ಆತನ ಮಹಿಮೆಯಲ್ಲಿ ಪಾಲುಗಾರರಾಗುವದಕ್ಕೆ ಸಿದ್ಧರಾಗುವದಕ್ಕೆ, ಈ ಲೋಕದಲ್ಲಿ ಬಾಧೆಗಳಲ್ಲಿಯೂ ಪಾಲುಗಾರರಾಗುವುದು ನಂತರ, ಮಹಿಮೆಯು ಬರುವಾಗ, ವರ್ತಮಾನದ ಆನಂದವು ಹೇಳಲಸಕ್ಯವಾದಂಥ ಆನಂದವಾಗಿ

ಮಾರ್ಪಡುತ್ತದೆ.

ಕ್ರೈಸ್ತರು ತಮ್ಮ ಬಾಧೆಗಳನ್ನು ಅನುಭವಿಸುವ ಆಲೋಚನೆಗಳು, ಬೈಬಲ್‌ನ ಇತರ ಕಡೆಗಳಲ್ಲಿರುವ ದೇವರ ಮಗನ ಸೇವೆಗೂ ಮತ್ತು ಜೀವಿತಕ್ಕೂ ಸೇರಿರುವ ಸಂಗತಿಯಾಗಿರುತ್ತದೆ. ಪೌಲನು ಬರೆದು, "ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ" (ಕೊಲೊಸ್ಸೆ 1:24). ಯಾವ ಬಾಧೆಯು ದೇವರಿಂದ ಯೇಸುವಿಗೆ ಬಂತೋ, ಅದೇ ಬಾಧೆಗಳು ಆತನ ಶಿಷ್ಯರಿಗೂ ಬರುವಂಥದ್ದಾಗಿದೆ. ಕ್ರಿಸ್ತನಲ್ಲಿ ಇನ್ನೂ ಕಾರ್ಯಗಳು ನಡೆಯಬೇಕಿವೆ. ದೇವ ಜನರು ಅನ್ಯರಿಗೆ ಸುವಾರ್ತೆಯನ್ನು ಸಾರುವಾಗ, ಅವರು ಕ್ರಿಸ್ತನ ಕಾರ್ಯಗಳನ್ನು ಪೂರ್ಣಮಾಡುವರು ಎಂಬ ಆಲೋಚನೆಯಾಗಿದೆ. ಅದೇ ರೀತಿಯಲ್ಲಿ ಅವರು ಹಿಂಸೆಗೆ ಒಳಗಾಗುವಾಗ, ಅವರು ಆತನ ಬಾಧೆಗಳನ್ನು ಪೂರ್ಣಮಾಡುತ್ತಾರೆ. ಆತನ ಕೆಲಸದಲ್ಲಿ ಪಾಲುಗಾರರಾಗಿ, ಮತ್ತು ದೇವರ ಮಗನ ಬಾಧೆಗಳಲ್ಲಿ ಪಾಲುಗಾರರಾಗುವುದು ಆನಂದಕ್ಕೆ ಕಾರಣವಾಗಿರುತ್ತದೆ.

## ದೇವರ ಮಹಿಮೆಯ ಆತ್ಮನು ಹಾಗೂ ದೇವರು ನಿಮ್ಮೊಂದಿಗಿರುವನು

ಮತ್ತಾಯ 5:1-12ರ ದಿವ್ಯಾನಂದದ ವಾಕ್ಯದ ಜೊತೆಯಲ್ಲಿ ಹೊಸ ಒಡಂಬಡಿಕೆಯ ಇನ್ನೂ ಇತರೆ ದಿವ್ಯಾನಂದದ ಮಾತುಗಳು ಅಡಕವಾಗಿವೆ. ಪರ್ವತ ಪ್ರಸಂಗದಲ್ಲಿ ಯೇಸು ಹೇಳಿದ್ದು, "ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆ ಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು" (ವಚನ 11). ಕರ್ತನ ಮಾತುಗಳನ್ನು ನೆನಪುಮಾಡಿಕೊಂಡು ಪೇತ್ರನು ಬಹುಶಃ ಬರೆಯುತ್ತಿರಬಹುದು 4:14ರಲ್ಲಿ ಇರುವ ಪದ, "ನಿಂದನೆ" ಮತ್ತು "ಧನ್ಯನು" ಎಂಬುವದು ಒಂದೇ ಆಗಿರುವುದು ಆಸಕ್ತಿಕರವಾಗಿದೆ.

ಕ್ರೈಸ್ತರು ಅನ್ಯಾಯವಾಗಿ ಹಿಂಸೆಯನ್ನು ಅನುಭವಿಸುವಾಗ, ಪೇತ್ರನು ಹೇಳಿದ್ದು "ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ" (4:14). ಮಹಿಮೆ ಎಂಬುದಕ್ಕೆ ಗ್ರೀಕ್ ಭಾಷೆಯು ಹೆಚ್ಚಿನ ಅಂಶವನ್ನು ನೀಡುತ್ತದೆ. ಅಪೊಸ್ತಲನು, ಒಂದು ವೇಳೆ ಈ ರೀತಿಯಾಗಿ ಹೇಳುತ್ತಿರಬಹುದು: "ಹಳೇ ಒಡಂಬಡಿಕೆಯಲ್ಲಿರುವ ಕರ್ತನ ತೇಜಸ್ಸು," ಎಂಬುದು, "ದೇವರ ಪರಿಶುದ್ಧ ಸನ್ನಿಧಿ" ಎಂಬುದಾಗಿದೆ. ವಿಮೋಚನಕಾಂಡ 24:15, 16 ಉದಾಹರಣೆಗೆ, "ಮೋಶೆ ಬೆಟ್ಟವನ್ನು ಹತ್ತಿದಾಗ ಮೇಘವು ಅದನ್ನು ಮುಚ್ಚಿಕೊಂಡಿತು. ಕರ್ತನ ತೇಜಸ್ಸು ಸೀನಾಯ ಬೆಟ್ಟದ ಮೇಲೆ ನಿಂತಿತು." (ಒತ್ತಿ ಹೇಳಿದ್ದು ನನ್ನದು.) ನಂತರದ ಯೆಹೂದ್ಯರ ಬರವಣಿಗೆಯಲ್ಲಿ "ದೇವರ ಪ್ರಸನ್ನತೆಯನ್ನು ಕುರಿತ" ಶೆಕೆನಾಯ ಎಂಬ ಪದ ಪ್ರಯೋಗವಾಗಿದೆ. ಬಹುಶಃ ಪೇತ್ರನು, ಇದನ್ನು ಆತ್ಮೀಕ ಅರ್ಥದಿಂದ ಹೇಳುತ್ತಿರಬಹುದು. ಈ ಕ್ರೈಸ್ತರು ಆತನ ನಾಮದ ನಿಮಿತ್ತ ನಿಂದೆಗೂ ಅಥವಾ ಅಪಮಾನಕ್ಕೂ ಒಳಗಾದಾಗ, ದೇವರ ತೇಜೋಮಯವಾದ ತೇಜಸ್ಸು ಅವರನ್ನು ಆವರಿಸಿತ್ತು ಎಂಬುದಾಗಿ.

## ತುಚ್ಛವಾದದಕ್ಕೆ ಬಾಧೆಪಡದೆ, ಉದಾತ್ತ ಧ್ಯೇಯಗಳಿಗಾಗಿ ಬಾಧೆಪಡಿರಿ

1 ಪೇತ್ರನ ಪತ್ರಿಕೆಯಲ್ಲಿ ಪರಿಶುದ್ಧವಾದ ಜೀವಿತವನ್ನು ಜೀವಿಸಲು ಕರೆನೀಡಲಾಗಿದೆ. ಅದು ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಬೇಕೆಂಬ ಮತ್ತು ಆತನ ಬರೋಣ ವನ್ನು ನೀಕ್ಷಿಸಬೇಕೆಂಬ ಬೋಧನೆಗೆ ಸಮಾನವಾಗಿದೆ. 1:14ರಲ್ಲಿ ಅಪೊಸ್ತಲನು ಪರಿಶುದ್ಧತೆಯ ಜೀವಿತಕ್ಕಾಗಿಯೇ ಬೇಡುವವನಾಗಿದ್ದಾನೆ. 2:12ರ ವಚನ 4:15ರ ವಚನಕ್ಕೆ ಸಮಾನವಾಗಿದೆ. 2:20ರಲ್ಲಿ ವಿಶೇಷವಾದ ಪರಿಶುದ್ಧ ಜೀವನವನ್ನು ಜೀವಿಸುವ ಕುರಿತಾಗಿ ಬರೆಯಲಾಗಿದೆ. 3:1, 2ರಲ್ಲಿ ಹೆಂಡತಿಯರಿಗಾಗಿ ಬರೆಯಲಾಗಿದೆ. 3:8-17 ಈ ಆಲೋಚನೆಯು ಪ್ರಮುಖವಾಗಿದೆ.

"ನಿಮ್ಮಲ್ಲಿ ಯಾವನಾದರು ಕೊಲೆಗಾರನು ಕಳ್ಳನು, ... ಆಗಿದ್ದು ಶಿಕ್ಷಾಪಾತ್ರನಾಗಬಾರದು"

4:15 ಎಂದು ಪೇತ್ರನು ಹೇಳಿದ್ದಾನೆ. ಕೆಟ್ಟವರಾಗಿ ಕ್ರೈಸ್ತರು ಬಾಧೆಪಡಬಾರದು ಎಂದು ಸಾಮಾನ್ಯ ಆಲೋಚನೆಯನ್ನು ನೀಡಿದ್ದಾನೆ. ಇವುಗಳನ್ನು ನೇರವಾಗಿ ಹೇಳಲಾಗಿದೆ, ಪಟ್ಟಿಯಲ್ಲಿರುವ ನಾಲ್ಕನೆಯ ಅಂಶವು ಕಷ್ಟಕರವಾಗಿದೆ. NASBಯಲ್ಲಿ "ತೊಂದರೆ ಮಾಡುವವನು" ಎಂಬ ಪದ ತರ್ಜುಮೆಗೊಂಡು "ತೊಂದರೆಯಲ್ಲಿ ಭಾಗಿಯಾಗುವವನು" ಎಂಬುದಾಗಿದೆ. NIVಯಲ್ಲಿ "ಇನ್ನೊಬ್ಬರ ಕಾರ್ಯಗಳಲ್ಲಿ ತಲೆ ಹಾಕುವವನು" ಇದನ್ನು ಗ್ರೀಕ್ ಭಾಷೆಯಲ್ಲಿ ಈ ಪದವನ್ನು ಹೊಸ ಒಡಂಬಡಿಕೆಯಲ್ಲಿಯಾಗಲೀ ಅಥವಾ ಇತರೆ ಸಾಮಾನ್ಯ ಬರವಣಿಗೆಗಳಲ್ಲಿ ಉಪಯೋಗಿಸಿರುವದಿಲ್ಲ. ಕೆಲವರು ಪೇತ್ರನೇ ಈ ಪದವನ್ನು ಉಂಟುಮಾಡಿದನು ಎಂದು ತಿಳಿಯುತ್ತಾರೆ. ಒಪ್ಪಿಕೊಳ್ಳಬಹುದಾದ ಪದಗಳಲ್ಲಿ, ಈ ಪದವು "ತುಂಟಾಟಿಕೆ ಮಾಡುವವನು" (RSV), ಅಥವಾ "ಮಂತ್ರವಾದಿ" ಕಳುವಾದ ವಸ್ತುಗಳನ್ನು ಇಟ್ಟುಕೊಂಡಿರುವವನು ದುರಾಶೆಯ ವ್ಯಕ್ತಿ ಮತ್ತು ಕ್ರಾಂತಿಕಾರಿ ಎಂಬುದಾಗಿದೆ. ಗ್ರೀಕ್ ಭಾಷೆಯ ಪರಿಣಿತರಿಗೂ ಇದರ ಅರ್ಥ ತಿಳಿಯುವದಿಲ್ಲ.

## ಆತನ ಹೆಸರಿನ ನಿಮಿತ್ತ ನಾಚಿಕೆ ಪಡಬೇಡಿರಿ (4:16-18)

ಕೆಟ್ಟದ್ದನ್ನು ಮಾಡುವವನಾಗಿ ಹಿಂಸೆಯನ್ನು ಅನುಭವಿಸುವುದು ದೇವರ ಮಗುವಿಗೆ ನಾಚಿಕೆಕರವಾಗಿದೆ, ಅದಕ್ಕೆ ಕ್ರೈಸ್ತನಾಗಿ ಬಾಧೆಪಡುವದರಲ್ಲಿ ಪೇತ್ರನು ಬರೆದದ್ದು ಅದು ದೇವರನ್ನು ಮಹಿಮೆಪಡಿಸಲು ಅವಕಾಶವಾಗಿರುತ್ತದೆ (4:16). ಹೊಸ ಒಡಂಬಡಿಕೆಯಲ್ಲಿ, "ಕ್ರೈಸ್ತ" ಎಂಬ ಪದವು ಕೇವಲ ಮೂರು ಸಾರಿ ಮಾತ್ರ ದಾಖಲಾಗಿದೆ. ಅದನ್ನು ಪೇತ್ರನು ಒಂದು ಸಾರಿ, ಲೂಕನು ಎರಡು ಸಾರಿ ಉಪಯೋಗಿಸಿದ್ದಾರೆ (ಅಪೊಸ್ತಲರಕೃತ್ಯಗಳು 11:26; 26:28). "ಕ್ರೈಸ್ತನು" ಎಂಬ ಪದವು ದೂಷಣೆಗೂ ಮತ್ತು ದೂರ ತಳ್ಳುವಿಕೆಗೂ ಸಂಬಂಧಪಟ್ಟದ್ದಾಗಿರಬಹುದು. ಅನ್ಯರು ಈ ಪದವನ್ನು ಉಪಯೋಗಿಸುವಾಗ ಈ ಕಾರ್ಯವಾಗುತ್ತಿತ್ತು. ಈ ಸಾರ್ಥಕ ನಾಮವನ್ನು ಉಪಯೋಗಿಸಿಕೊಂಡು ತಮ್ಮ ಪ್ರತ್ಯೇಕತೆಯನ್ನು ತೋರುತ್ತಿದ್ದರು. ಯಾವ ಮನುಷ್ಯನನ್ನು; ಒಂದು ನಾಮವು, ಅವಮಾನಕ್ಕೆ ಈಡು ಮಾಡುತ್ತಿತ್ತೋ, ಅಂಥ ನಾಮವನ್ನು ಹೊಂದಿಕೊಂಡು ಜೀವಿಸುವುದು ಕಷ್ಟಕರವಾಗಿತ್ತು. ಕ್ರಿಸ್ತನನ್ನು ಅಂಗೀಕರಿಸಿದವರು ಮತ್ತು ಆತನಿಗೆ ವಿಧೇಯರಾದವರು ಮಾತ್ರ, ಈ ಕ್ರೈಸ್ತ ನಾಮವನ್ನು ಹೊಂದಲು ಅರ್ಹರಾಗಿದ್ದರು.

ಆದಿ ಕ್ರೈಸ್ತರು ಈ ನಾಮವನ್ನು ತಡಮಾಡದೆ ಅಂಗೀಕರಿಸಿದರು, ಆದರೆ ಯಾಕೆ ದೇವರು ಅವರನ್ನು ಹಿಂಸೆಗೆ ಒಳಪಡಿಸಿದನು ಎಂದು ಅರಿಯದವರು. ನ್ಯಾಯವು ತನ್ನ ಚೀಲವನ್ನು ತೆಗೆದುಕೊಂಡು ಪ್ರಪಂಚದಿಂದ ಹೊರಹೋಗಿರುವ ಅನುಭವವಾಯಿತು. ಹಲವು ಸಾರಿ ನಮಗೂ ಈ ಅನುಭವವಾಗುತ್ತದೆ. ಮುಗ್ಧರು ಬಾಧೆಗೊಳಗಾಗುತ್ತಾರೆ, ಶಕ್ತಿವುಳ್ಳವರು, ಹಣವಂತರು, ಪ್ರಭಾವಿತರು, ಉತ್ತಮರಾದವರನ್ನು ತುಳಿದು ಹಾಕುತ್ತಾರೆ. "ನ್ಯಾಯವು ಪ್ರಪಂಚದಲ್ಲಿ ಇಲ್ಲ ಎಂಬುವುದೇ" ದೂರಾಗಿರುತ್ತದೆ, ಯೋಬನ ಮತ್ತು ಕೀರ್ತನೆಗಾರನ ಪುಸ್ತಕದಲ್ಲಿಯು ಇದು ಪ್ರತಿಧ್ವನಿಸುತ್ತದೆ. (ಯೋಬ 24:1; ಕೀರ್ತನೆ 10; ಯೆರೆಮೀಯ 12:1, 2ನ್ನು ನೋಡಿರಿ.) ಆಸ್ಯ ಸೀಮೆಯ ಕ್ರೈಸ್ತರು, ಯಾಕೆ ದೇವರು ತಮ್ಮ ವೈರಿಗಳಿಗೆ ನ್ಯಾಯ ತೀರಿಸಲಿಲ್ಲ ಎಂದು ಆಶ್ಚರ್ಯಪಟ್ಟರು. ದೇವರು ನ್ಯಾಯ ತೀರಿಸುವನು ಎಂಬುದೇ ಪೇತ್ರನ ಉತ್ತರವಾಗಿತ್ತು. ಅದು ಆತನ ಸಮಯದಲ್ಲಿ ಮತ್ತು ಆತನ ರೀತಿಯಲ್ಲಿ ಮಾತ್ರ ನ್ಯಾಯ ತೀರಿಸುವನು. ಆತನು ಅದನ್ನು ಮಾಡುವನು (4:17).

ಇದು ಆಶ್ಚರ್ಯ ಎನಿಸಬಹುದು, ಪೇತ್ರನ ಓದುಗರ ಹಿಂಸೆಯ ಮೂಲಕವಾಗಿ ಈಗಾಗಲೇ ದೇವರ ನ್ಯಾಯತೀರ್ಪು ದುಷ್ಟರ ಮೇಲೆ ಪ್ರಾರಂಭವಾಗಿತ್ತು ಎಂದು ಪೇತ್ರನು ಅದರ ಕುರಹನ್ನು ನೀಡುತ್ತಿದ್ದಾನೆ. ದೇವರ ನ್ಯಾಯತೀರ್ಪು ಈಗಾಗಲೇ ಪ್ರಾರಂಭವಾಗಿತ್ತು; ಅದು ದೇವರ ಮನೆಯಲ್ಲಿ ಪ್ರಾರಂಭವಾಗಿತ್ತು. ಹಬಕ್ಕೂಕನ ದಿವಸಗಳಲ್ಲಿದ್ದಂತೆ, ದೇವರು

ತನ್ನ ಜನರನ್ನು ಶಿಕ್ಷಿತರಾಗಿ ಮಾಡಲು, ಮಹಾಕ್ರೂರಿಗಳಾದ, ದೇವರನ್ನರಿಯದ ಜನರನ್ನು ಉಪಯೋಗಿಸಿಕೊಂಡನು. ಹಬಕ್ಕೂಕನು ಸ್ಪಷ್ಟಪಡಿಸಿದಂತೆ, ದೇವರು ತನ್ನ ಸಮಯದಲ್ಲಿ ಕ್ರಿಸ್ತಿಯರಿಗೆ ತೀರ್ಪುನೀಡಿದಂತೆ, ದೇವರು ಅವರ ವಿರೋಧಿಗಳನ್ನು ಶಿಕ್ಷಿಸುವನು ಎಂದು ಪೇತ್ರನು ತನ್ನ ಓದುಗರಿಗೆ ತಿಳಿಸಿದನು. ಪೇತ್ರನು ಮತ್ತು ಅವನ ಓದುಗರು ತಿಳಿದಂತೆ, ಎಲ್ಲವುಗಳ ಅಂತ್ಯವು ಹತ್ತಿರವಾಯಿತು ಎಂದು ನಾವು ಸಹ ತಿಳಿಯುವವರಾಗಿದ್ದೇವೆ (4:7). ಆದಾಗ್ಯೂ ದೇವರು ತನ್ನ ಹಸ್ತದಿಂದ ತನ್ನ ಜನರನ್ನು ಶಿಕ್ಷಿಸಿ, ಕ್ರಮಪಡಿಸಿ, ಚಿನ್ನವು ಬೆಂಕಿಯಿಂದ ಪರಿಶೋಧಿಸಲ್ಪಟ್ಟಂತೆ, ಅವರನ್ನು ಸಿದ್ಧಪಡಿಸುತ್ತಿದ್ದನು (1:6, 7). ಆತನ ತೀರ್ಪು ಪ್ರಾರಂಭವಾಗಿತ್ತು. ಅದು ಕ್ರೈಸ್ತರಲ್ಲಿ ಪ್ರಾರಂಭವಾಗಿದ್ದರೆ, ಕ್ರಿಸ್ತನ ಸುವಾರ್ತೆಗೆ ಅವಿಧೇಯರಾದವರ ಬಳಿಯಲ್ಲಿ ಅಂತ್ಯವಾಗುತ್ತದೆ? ಭರವಸೆಯುಳ್ಳ ನಿರೀಕ್ಷೆಯು ಅವರನ್ನು ಪ್ರೋತ್ಸಾಯಿಸಿ, ಅವರು ಹಿಂಸೆಯಲ್ಲಿ ಬಲಗೊಂಡು ಅವರ ಪ್ರಪಂಚವನ್ನು ಬದಲಾಯಿಸುವಂತೆ ಮಾಡಿತ್ತು. ಕಡೇ ಕಾಲದಲ್ಲಿ ಬದುಕುತ್ತಿದ್ದೇವೆ ಎಂದು ತಿಳಿಯುವವರು, ತಮ್ಮ ಜೀವಿತದ ಪ್ರತಿಯೊಂದು ನಿರ್ಧಾರಗಳ ನ್ನು ವ್ಯತ್ಯಾಸವುಳ್ಳಂಥ ದೃಷ್ಟಿಕೋನದಿಂದ ಮಾಡುತ್ತಾರೆ.

ಕರ್ತನ ಬರುವಿಕೆಯ ಕುರಿತಾಗಿ, ಕರ್ತನ ಸಭೆಯು ತನ್ನ ಆತ್ಮವನ್ನು ಪರೀಕ್ಷಿಸಿಕೊಳ್ಳ ಬೇಕು ಎಂದು, ನನ್ನ ಅನಿಸಿಕೆಯಾಗಿದೆ - ಅಥವಾ ಬರೋಣವನ್ನು ಅಪೇಕ್ಷಿಸದೆ ಇರುವಂಥದ್ದು. ಈ ಕಾಲದ ವಿರೋಧದ ಪ್ರಪಂಚವನ್ನು ಯಥಾರ್ಥವಾದ ಕ್ರೈಸ್ತತ್ವದಿಂದ ಎದುರಿಸೋಣ, ಪೇತ್ರನ ಮೊದಲ ಓದುಗರು ಅನುಭವಿಸಿದ ರೀತಿಯಲ್ಲಿ ನಾವು ಎದುರಿಸುವ ಹಿಂಸೆಯು ಹಗುರ ವಾಗಿರುತ್ತದೆ. ಯಾಕೆಂದರೆ ಈ ನವೀನ ಪ್ರಪಂಚವು, ಪ್ರಥಮ ಶತಮಾನಕ್ಕಿಂತಲೂ, ಹೆಚ್ಚು ಕನಿಕರ ಮತ್ತು ಸಹಿಷ್ಣತೆ ಉಳ್ಳದ್ದಾಗಿರುತ್ತದೆ. ಈಗಿನ ಸಭೆಯು ತುರ್ತಾದ ಕಾರ್ಯಗಳನ್ನು ಮಾಡದೆ ಇರುವದರಿಂದ, ಪ್ರಪಂಚವು ಅವರಿಗೆ ಹೆಚ್ಚು ಹಿಂಸೆಯನ್ನು ನೀಡುತ್ತಿರುವದಿಲ್ಲ.

4:18ರ ವಚನವನ್ನು ಪೇತ್ರನು ಜ್ಞಾನೋಕ್ತಿ 11:31 ರಿಂದ ಆರಿಸಿ ತಿಳಿಸಿದ್ದಾನೆ, "ನೀತಿ ವಂತನೇ ರಕ್ಷಣೆಹೊಂದುವುದು ಕಷ್ಟವಾದರೆ ಭಕ್ತಿಹೀನನೂ, ಪಾಪಿಷ್ಠನೂ ನಿಲ್ಲುವದು ಹೇಗೆ?" ತೀರ್ಪಿನ ಕುರಿತಾಗಿಯಾಗಲೀ, ರಕ್ಷಣೆ ಮತ್ತು ನೀತಿಯ ಕುರಿತಾಗಿ ನಮ್ಮ ಮನಸ್ಸುಗಳು ಯೋಚಿ ಸದೆ ಇರುವಲ್ಲಿ, ಈ ಆಲೋಚನೆಯು ನಮ್ಮಲ್ಲಿ ಯಾವ ಬದಲಾವಣೆಯನ್ನು ಮಾಡಲಾರದು. ಸಭೆಯು ಪುನಃ ನಿರ್ಮಾಣವಾಗಬೇಕಾದರೆ, ಮೊದಲ ಕ್ರೈಸ್ತರಲ್ಲಿದ್ದ ಕರ್ತನ ಆಗಮನದ ಕುರಿತಾದ ಅಪೇಕ್ಷೆ ಮತ್ತು ಕಾತುರತೆ ನಮ್ಮಲ್ಲಿದ್ದರೆ ಮಾತ್ರ ಸಾಧ್ಯವಾಗುತ್ತದೆ. "ಎಲ್ಲವುಗಳ ಅಂತ್ಯವು ಹತ್ತಿರವಾಯಿತ್ತು." "ಹಾಗೆಯೇ ಆಗಲಿ, ಕರ್ತನಾದ, ಯೇಸುವೇ ಬಾ"

## ನಂಬಿಗಸ್ತನಾದ ಸೃಷ್ಟಿಕರ್ತನಿಗೆ ನಿಮ್ಮನ್ನು ಸಮರ್ಪಿಸುವದಕ್ಕೆ ಅಂಜಬೇಡಿರಿ (4:19)

ಅವರು ಕ್ರೈಸ್ತರಾದಾಗ, ಅವರ ಮೇಲೆ ಆಡಳಿತ ನಡೆಸಿದ ಬಾಧೆಗಳನ್ನು ಅವನ ಓದುಗರು ಯಾವ ರೀತಿಯಲ್ಲಿ ಹತೋಟಿಗೆ ತಂದರು ಎಂಬ ಮೂಲ ನಿಯಮಗಳನ್ನು ಪೇತ್ರನು ತಿಳಿಸಿದ್ದಾನೆ. ಅದರಲ್ಲಿ ವಿಶೇಷವಾದ ಎರಡು ಸಂಗತಿಗಳು ಅಡಕವಾಗಿತ್ತು.

### ನಂಬಿಗಸ್ತನಾದ ಸೃಷ್ಟಿಕರ್ತನಿಗೆ ನಿಮ್ಮನ್ನು ಸಮರ್ಪಿಸಿಕೊಳ್ಳಿರಿ

ತಮ್ಮ ಆತ್ಮಗಳನ್ನು ನಂಬಿಗಸ್ತನಾದ ಸೃಷ್ಟಿಕರ್ತನಿಗೆ ಒಪ್ಪಿಸಲಿ ಎಂದು ಪೇತ್ರನು ಅವರಿಗೆ ತಿಳಿಸಿದನು (4:19). ಯಾವುದನ್ನಾದರೂ, ಯಾರಿಗಾದರೂ ಒಪ್ಪಿಸುವುದು ಅಂದರೆ ಸಮರ್ಪಣೆ ಎಂಬುದಾಗಿರುತ್ತದೆ. "ಒಪ್ಪಿಸು" ಎಂಬ ಗ್ರೀಕ್ ಪದವನ್ನು ಪೌಲನು ಉಪಯೋಗಿ ಸಿದ್ದಾನೆ. 2 ತಿಮೊಥೆ 2:2ರಲ್ಲಿ: "ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು."

ನಾವು ಪರಿಪಕ್ವತೆಗೆ ಬರುವಾಗ, ಇತರರಿಗೆ ನಮ್ಮನ್ನು ಒಪ್ಪಿಸಿಕೊಡುವ ವಿಷಯದಲ್ಲಿ ಕಷ್ಟವನ್ನು ಅನುಭವಿಸಿದ್ದೇವೆ. ಹಲವು ಬಾರಿ ತಿರಸ್ಕರಿಸಲ್ಪಟ್ಟಿದ್ದೇವೆ. ನಮ್ಮನ್ನು ನಾವು ಇತರರಿಗೆ

ಮತ್ತು ಬೇರೆ ವಿಷಯಗಳಿಗೆ ಒಪ್ಪಿಸುವುದು ಕಷ್ಟವಾಗುತ್ತದೆ. ಬೇರೆಯವರನ್ನು ಅವಲಂಭಿಸದೆ, ನಾವು ನಮ್ಮನ್ನೆ ಅವಲಂಭಿಸುವುದು ಉತ್ತಮವೇ ಎಂದು ತಿಳಿಯುತ್ತೇವೆ. ಇಲ್ಲಿ ಒಂದು ಸಮಸ್ಯೆ ಉದ್ಭವಿಸಬಹುದು; ಅಂತಿಮವಾಗಿ ನಾವು ಸ್ವಾವ-ಲಂಭಿಗಳಾಗಿರುವದಿಲ್ಲ. "ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ ಅದರ ಲಾವಣ್ಯವೆಲ್ಲ ಅಡವಿಯ ಹೂವಿನಂತಿದೆ" (ಯೆಶಾಯ 40:6). ಪೇತ್ರನು ಈ ವಾಕ್ಯವನ್ನು 1:24ರಲ್ಲಿ ತಿಳಿಸಿದ್ದಾನೆ. ಅವನು ತನ್ನ ಓದುಗರ ಸಕಲ ಪ್ರಶ್ನೆಗಳಿಗೂ ಉತ್ತರಿಸದೆ, ಯೋಬನ ಬಾಧೆಗಳ ಕುರಿತಾಗಿ ಉತ್ತರಿಸಿದನು, ಒಪ್ಪಿಸಿಕೊಡುವದಕ್ಕೆ ಒಬ್ಬನಿದ್ದಾನೆ ಎಂದು ತಿಳಿಸಿದನು. ಸೃಷ್ಟಿ ಕರ್ತನಿಗೆ ಸಮರ್ಪಿಸಿಕೊಳ್ಳಿರಿ ಎಂದು ಪೇತ್ರನು ತನ್ನ ಓದುಗರಿಗೆ ತಿಳಿಸಿದಾಗ, ಯೋಬನ ನಿರ್ಣಯವನ್ನೆ ತಿಳಿಸಿದನು: "ನೀನು ಸಕಲ ಕಾರ್ಯಗಳ ನ್ನು ನಡಿಸಬಲ್ಲಿಯಂತಲೂ ಯಾವ ಸಂಕಲ್ಪವು ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ, ಇದ್ದೇನೆ" (ಯೋಬ 42:2).

### ಒಳ್ಳೆಯದನ್ನು ಮಾಡುವದರಲ್ಲಿ ಮುಂದುವರಿಯಿರಿ

4:19ರ ಕಡೆಯ ವಾಕ್ಯವನ್ನು NASB ಈ ರೀತಿ ಅನುವಾದ ಮಾಡಿರುತ್ತದೆ. NIVಯಲ್ಲಿ ಅಲ್ಪ ವ್ಯತ್ಯಾಸವಿದೆ. NASB "ಅವರ ಆತ್ಮವನ್ನು ಒಳ್ಳೆಯದನ್ನು ಮಾಡುವದರ ಮೂಲಕ ನಂಬಿಗಸ್ತನಾದ ಸೃಷ್ಟಿ ಕರ್ತನಿಗೆ ಅರ್ಪಿಸು" NIVಯಲ್ಲಿ ತಮ್ಮನ್ನು ನಂಬಿಗಸ್ತನಾದ ಸೃಷ್ಟಿ ಕರ್ತನಿಗೆ ಒಪ್ಪಿಸಿ, ಒಳ್ಳೆಯದನ್ನು ಮಾಡುವದರಲ್ಲಿ ಮುಂದುವರಿಯಿರಿ ಎಂದು ಹೇಳ ಲಾಗಿದೆ. ಒಳ್ಳೆಯದನ್ನು ಮಡುವದರ ಮೂಲಕ ಒಬ್ಬನು ತನ್ನನ್ನು ಸಮರ್ಪಿಸಿಕೊಳ್ಳುತ್ತಾನೆ. ಎರಡು ಕಾರ್ಯಗಳು ಒಂದರ ಹಿಂದೆ ಒಂದು ಇರುತ್ತದೆ NIVಯಲ್ಲಿ ಅವೆರಡು ವ್ಯತ್ಯಾಸ ವಾದಂತೆ ಕಾಣುತ್ತದೆ: ಒಂದು ತನ್ನನ್ನು ನಂಬಿಗಸ್ತನಾದ ಸೃಷ್ಟಿಕರ್ತನಿಗೆ ಒಪ್ಪಿಸುವುದು; ಅದರ ಜೊತೆಯಲ್ಲಿ, ಒಳ್ಳೆಯದನ್ನು ಮಾಡುವದು. ದೇವರಿಗೆ ಒಪ್ಪಿಸುವುದು ಸಮಸ್ಯೆಯಲ್ಲ. ಒಳ್ಳೆಯದನ್ನು ಮಾಡುವದರ ಮೂಲಕ ದೇವರಿಗೆ ಸಮರ್ಪಿಸಿಕೊಳ್ಳುವದು. ದೇವರಿಗೆ ಸಮರ್ಪಿಸಿಕೊಳ್ಳುವದನ್ನು ಒಳ್ಳೆಯದನ್ನು ಮಾಡುವದರ ಮುಖಾಂತರ ಒಬ್ಬನು ಕಲಿಯುವನು. ಯಾವುದೆ ಬೆಲೆಯಿಲ್ಲದ ಸಮಸ್ಯೆಗಳ ಕುರಿತಾಗಿ ನಾನು ಯೋಚಿಸುವದಿಲ್ಲ. ನಾವು ಬೈಬಲ್‌ನ್ನು ಅಭ್ಯಾಸಿಸುವರ ನಡುವೆ ಕೂತುಕೊಂಡು, ದೇವರನ್ನು ಪ್ರೀತಿಸುವದು ಆಶ್ಚರ್ಯಕರವೇ, ಆದರೆ ನಾವು ಲೋಕ ದಲ್ಲಿ ಎಸೆಯಲ್ಪಟ್ಟಾಗ ನಾವು ಯಾವ ರೀತಿ ವರ್ತಿಸುತ್ತೇವೆ ಎಂಬುದು ಪ್ರಾಮುಖ್ಯ.

ಟಾಲ್‌ಮುದ್ ಎಂಬ ಯೆಹೊದ್ಯರ ಕಾರ್ಯವು ದೊಡ್ಡದೇ. ಆದರೆ ಅದು ನಮಗೆ ಅಲ್ಪವಾಗಿ ಕಾಣಬಹುದು, ಅದರಲ್ಲಿ ಆಸಕ್ತಿಕರವಾದ ಗುಟ್ಟುಗಳಿವೆ. ಒಬ್ಬ ಶಿಷ್ಯನು, ತನ್ನ ರಬ್ಬಿಯ ಬಳಿಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದನು, "ನಾನು ದೇವರನ್ನು ಪ್ರೀತಿಸುವ ಬಗ್ಗೆ ಹೇಗೆ ಕಲಿಯಲಿ?" ರಬ್ಬಿಯ ವಿವೇಕದ ಉತ್ತರ ನಿನ್ನ ಇಷ್ಟದ ಪ್ರಕಾರ ಹೇಗೆ ಕರ್ತನನ್ನು ಪ್ರೀತಿಸಬಹುದು ಎಂದು ಊಹಿಸಿಕೋ. ಅದನ್ನೆ ಮಾಡು, ನಂತರ ಆತನನ್ನು ಪ್ರೀತಿಸಲು ಸಾಧ್ಯವಾಗುತ್ತದೆ. "ತನ್ನ ಓದುಗರಿಗೆ ಪೇತ್ರನು ನೀಡಿದ ಪ್ರಬೋಧನೆಗಳಲ್ಲಿ ಯಾವ ವ್ಯತ್ಯಾಸವೂ ಇರುವದಿಲ್ಲ, ನಿಮ್ಮನ್ನು ದೇವರಿಗೆ ಸಮರ್ಪಿಸಿಕೊಳ್ಳಿರಿ," ನಾವು ದೇವರಿಗೆ ಹೇ ಗೆ ಒಪ್ಪಿಸಿಕೊಡಬಹುದು? ಒಪ್ಪಿಸುವ ಕ್ರಿಯೆಯಿಂದಲೇ ಅದು ಸಾಧ್ಯ. ನಮ್ಮ ಕ್ರಿಯೆಗಳು ನಮ್ಮ ಭಾವನೆಗಳನ್ನು ತಿಳಿಸುತ್ತವೆ. ಮತ್ತು ಆ ಭಾವನೆಗಳೇ, ನಮ್ಮ ಕ್ರಿಯೆಯನ್ನು ನಿರ್ಧರಿಸುತ್ತಿವೆ.

## ಮುಕ್ತಾಯ

4:12-19ರವರೆಗೆ "ಅಗ್ನಿ ಮಯವಾದ ಸೂಚನೆಗಳನ್ನು" ಒಳಗೊಂಡಿರುವ ಭಾಗವನ್ನು ಪೇತ್ರನು ನಮ್ಮ ಮುಂದೆ ಇಟ್ಟಿದ್ದಾನೆ. ಪತ್ರಿಕೆಯಲ್ಲಿನ ಇಂಥ ಒಂದು ಶಕ್ತಿಯು ಇನ್ನೆಲ್ಲಿಯೂ ತಿಳಿಸಲಾಗಿರುವದಿಲ್ಲ. ಈ ಪತ್ರಿಕೆಯಲ್ಲಿ ಇನ್ನೆಲ್ಲಿಯು ತಿಳಿಸದಂತೆ, ಈ ಭಾಗದಲ್ಲಿ ಹಿಂಸೆ

ಹೊಂದುವಾಗ ಕ್ರೈಸ್ತರು ಎರಡು ವಿಧದಲ್ಲಿ ಸ್ಪಂಧಿಸುವಂತೆ ತಿಳಿಸಿದ್ದಾನೆ: (1) ಪರಿಶುದ್ಧವಾದ ಜೀವಿತಕ್ಕೆ ಮಾರ್ಪಡಿಸಿಕೊಳ್ಳುವದು (2) ಕರ್ತನ ಬರೋಣವನ್ನು ಹಾರೈಸುವುದು. ಬೇರೆ ವಿಷಯಗಳು ಪ್ರಾಮುಖ್ಯ ಇರುವದಿಲ್ಲ ಎಂಬುದಾಗಿರುವದಿಲ್ಲ, ಆದರೆ ಇಲ್ಲಿ ತುರ್ತಾದ ಸಂದೇಶವಿದೆ. ಅವರ ಹಿಂಸೆಯ ಕುರಿತಾದ ವೇದನೆಯು, ಪೇತ್ರನು ಅವರಿಗೆ ನ್ಯಾಯ ತೀರ್ಪಿನ ಕುರಿತು ತಿಳಿಸಲು ಸ್ಪೂರ್ತಿ ನೀಡಿತು, ಆ ತೀರ್ಪಿನ ಪ್ರಾರಂಭವನ್ನು ಅವರು ನೋಡುವಂತಾದರು. ಚಿಕ್ಕವರಿಂದ ದೊಡ್ಡವರವರೆಗೂ ಪೇತ್ರನು ಪ್ರಶ್ನೆಗಳನ್ನು ಕೇಳಿದನು. ದೇವರ ಪರಿಶೋಧಿತವಾದ ನ್ಯಾಯ ತೀರ್ಪು ನಂಬುವವರಿಗೆ ಕಷ್ಟಕರವಾಗಿದ್ದರೆ, ಸುವಾರ್ತೆಯನ್ನೂ ನಂಬದವರಿಗೆ ಅದು ಎಷ್ಟು ಕ್ರೂರವಾಗಿರಬಹುದು?

ಈ ದಿನದ ಕ್ರಿಸ್ತನ ಸಭೆಗಳಿಗೆ, ಈ ವಾಕ್ಯಭಾಗವು ವಿಶೇಷವಾದ ಸಂದೇಶವನ್ನು ನೀಡುತ್ತದೆ: ನಾವು ಕಡೆಯ ದಿವಸಗಳಲ್ಲಿ ಜೀವಿಸುತ್ತಿದ್ದೇವೆ. ಕರ್ತನು ಬೇಗನೆ ಬರಲಿದ್ದಾನೆ. ಆತನೊಂದಿಗೆ ವರ್ತಮಾನ ಕಾಲದಲ್ಲಿ ಬಾಧೆಗೆ ಒಳಗಾದರೆ ನಾವು ಧನ್ಯರೆ ಯಾಕೆಂದರೆ ಆತನ ಮಹಿಮೆಯು ಬರುವಾಗ ನಮಗೆ ಮಹಾದಾನಂದವಾಗುತ್ತದೆ.